ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1394
ಸದಸ್ಯರ ಹೆಸರು	ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	24.12.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಬೆಟ್ಟದಕೂರ್ಲಿ ಗ್ರಾಮದಿಂದ ತುಡನೂರು ಗ್ರಾಮದವರೆಗಿನ ರಸ್ತೆ ಡಾಂಬರೀಕರಣ ಮಾಡುವ ಕಾಮಗಾರಿ ಯಾವಾಗ ಕೈಗೊಳ್ಳಲಾಗುವುದು; (ಮಾಹಿತಿ ನೀಡುವುದು)	ಸೊರಬ ತಾಲ್ಲೂಕಿನ ಬೆಟ್ಟದಕೂರ್ಲಿ ಗ್ರಾಮದಿಂದ ತುಡನೂರು ಗ್ರಾಮದವರೆಗಿನ ರಸ್ತೆಯು ಮಣ್ಣಿನ ರಸ್ತೆಯಾಗಿದ್ದು, 2.50 ಕಿ.ಮೀ. ಉದ್ದದ ರಸ್ತೆಯಾಗಿರುತ್ತದೆ. ಸದರಿ ರಸ್ತೆಗೆ ಎರಡು ಪದರ ಜೆಲ್ಲಿ ಬಿಚಾವಣೆ ಮಾಡಿ ಡಾಂಬರೀಕರಣ ಮಾಡಲು ಅಂದಾಜು ರೂ.100.00 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. ಆರ್ಥಿಕ ಇಲಾಖೆಯು ಒದಗಿಸುವ ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಬೇಕಿದೆ.
ಆ.	ಬೆಟ್ಟದಕೂರ್ಲಿ ಗ್ರಾಮದಿಂದ ಕಂತನಹಳ್ಳಿ, ಬೇಚರ ಗ್ರಾಮದವರೆಗಿನ ರೈತನ ಜಮೀನಿಗೆ ಹೋಗುವ ರಸ್ತೆ ಅಭಿವೃದ್ಧಿ ಮಾಡಲಾಗುವುದೇ;	ಸದರಿ ರಸ್ತೆಯ (ಡಿ.ಆರ್.ಆರ್.ಪಿ. ರಸ್ತೆ) ಮೇಲ್ಮೈ ಪದರವು ಮಣ್ಣಿನ ರಸ್ತೆಯಾಗಿದ್ದು, 3.00 ಕಿ.ಮೀ. ಸರಪಳಿ ಹೊಂದಿದ್ದು, ರಸ್ತೆಗೆ WBM Grading-2 ಜೆಲ್ಲಿ ಬಿಚಾವಣೆ ಮಾಡಲು ಅಂದಾಜು ರೂ.45.00 ಲಕ್ಷಗಳ ಅನುದಾನದ ಅವಶ್ಯಕತೆಯಿರುವುದಾಗಿ ಅಂದಾಜಿಸಲಾಗಿದೆ. ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಯನ್ನು ಅಭಿವೃದ್ಧಿಪಡಿಲಸಲು ಕ್ರಮ ಕೈಗೊಳ್ಳಬೇಕಿದೆ.
ಇ.	ಪುಟ್ಟನಹಳ್ಳಿ ಗ್ರಾಮದ ಊರವಳಗಿನ ರಸ್ತೆ ಹಾಗೂ ಹಕ್ಕಲಗೇರಿ ವರೆಗೆ ರಸ್ತೆ ಅಭಿವೃದ್ಧಿ ಕಾರ್ಯ ಯಾವಾಗ ಮಾಡಲಾಗುವುದು;	ಪುಟ್ಟನಹಳ್ಳಿ ಗ್ರಾಮದ ಊರವಳಗಿನ ರಸ್ತೆ ಹಾಗೂ ಹಕ್ಕಲಗೇರಿ ವರೆಗೆ (ಡಿ.ಆರ್.ಆರ್.ಪಿ. ರಸ್ತೆ) ರಸ್ತೆ ಅಭಿವೃದ್ಧಿಪಡಿಸಲು ಒಂದು ಬ್ರಿಡ್ಜ್ ನಿರ್ಮಿಸಿ ಕೊಂಡು 1.00 ಕಿ.ಮೀ. ರಸ್ತೆ ನಿರ್ಮಿಸಬಹುದಾಗಿರುತ್ತದೆ. ಇದಕ್ಕೆ ಅಂದಾಜು ರೂ.100.00 ಲಕ್ಷಗಳ ಅವಶ್ಯಕತೆ ಇರುತ್ತದೆ. ಆರ್ಥಿಕ ಇಲಾಖೆಯು ಒದಗಿಸುವ ಅನುದಾನ ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಬೇಕಿದೆ.
ಈ.	ಶಿರಿನಾಯಕನಕೊಪ್ಪ ಗ್ರಾಮದಿಂದ ಕಂತನಹಳ್ಳಿ, ಬೇಚರ ಗ್ರಾಮದವರೆಗೆ ರಸ್ತೆ	ಬಂದಿರುವುದಿಲ್ಲ

	ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	
ಉ.	ದ್ಯಾವನಹಳ್ಳಿ ಗ್ರಾಮದ ಊರ ಒಳಗಿನ ರಸ್ತೆ ಅಭಿವೃದ್ಧಿ ಕಾರ್ಯ ಯಾವಾಗ ಕೈಗೊಳ್ಳಲಾಗುವುದು;	ಸದರಿ (ಡಿ.ಆರ್.ಆರ್.ಪಿ. ರಸ್ತೆ) ರಸ್ತೆಯು ಮೇಲ್ಮೈ ಪದರವು ಮಣ್ಣಿನ ರಸ್ತೆಯಾಗಿದ್ದು, ಸುಮಾರು 1.00 ಕಿ.,ಮೀ. ರಸ್ತೆ ಇದ್ದು, ಡಾಂಬರೀಕರಣ ಮಾಡಲು ರೂ.60.00 ಲಕ್ಷಗಳ ಅನುದಾನದ ಅವಶ್ಯಕತೆ ಇದೆ.
ಊ.	ಈ ಎಲ್ಲಾ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾರ್ಯ ಯಾವ ಕಾಲಮಿತಿಯೊಳಗೆ ಕೈಗೊಳ್ಳಲಾಗುವುದು? (ಸಂಪೂರ್ಣ ವಿವರ ನೀಡುವುದು)	ಮೇಲ್ಕಂಡ ಎಲ್ಲಾ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನಲ್ಲಿ ಅನುದಾನದ ಕೊರತೆಯಾಗಿರುತ್ತದೆ. ಗ್ರಾಮೀಣ ಪ್ರದೇಶಗಳ ವ್ಯಾಪ್ತಿಯಲ್ಲಿ ಅರ್ಹ ವಿರುವ ಹಾಗೂ ಅಭಿವೃದ್ಧಿ ಪಡಿಸಲೇ ಬೇಕಾಗಿರುವ ರಸ್ತೆಗಳಿಗೆ ಹೆಚ್ಚುವರಿ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ . ಆರ್ಥಿಕ ಇಲಾಖೆಯು ಅನುದಾನ ಒದಗಿಸಿದ್ದಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಮೇಲ್ಕಂಡ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಬೇಕಿದೆ.

ಸಂಖ್ಯೆ: ಗ್ರಾಅಪ:15ನೇವಿಸ:144:ಆರ್.ಆರ್.ಸಿ:2021

(ಕೆ.ಎಸ್.ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು